**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ,**

**ಟಿ.ನರಸೀಪುರ**

**ದಿನಾಂಕ 22 ನೇ ಜನವರಿ 2025**

**ಸಿಸಿ ಸಂಖ್ಯೆ: 1290/2024**

ಫಿರ್ಯಾದಿಃ : ರಾಜ್ಯದ ಪರವಾಗಿ ತಲಕಾಡು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು : 1. ಯಾಕುಬ್ ಪಾಷ ಬಿನ್ ಅಬ್ದುಲ್ ಸುಬಾನ್,
ವಯಸ್ಸು 64 ವರ್ಷ.

2. ನೇಹಾ ಅಜ್ ನಮ್ ಕೋಂ ವಾಸಿಮ್ ಅಹಮ್ಮದ್,
ವಯಸ್ಸು 27 ವರ್ಷ.

3. ಶಕಿರಾ ಜಾನ್ ಕೋಂ ಯಾಕುಬ್ ಪಾಷ,
ವಯಸ್ಸು 55 ವರ್ಷ.

4. ಫರ್ ಜಾನ ತಾಜ್ ಬಿನ್ ಆಯಾಜ್ ಪಾಷ,
ವಯಸ್ಸು 35 ವರ್ಷ.

ಎಲ್ಲರ ವಾಸಃ ಟಿ.ಮೇಗಡಹಳ್ಳಿ ಗ್ರಾಮ, ತಲಕಾಡು ಹೋಬಳಿ,
ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ ಎನ್.ನಿವೇದಿತಾ, 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆಯನ್ನು ಮಾಡುತ್ತೇನೆ.

ಮೊದಲನೆಯದಾಗಿ ದಿನಾಂಕಃ 14/03/2024 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ, ತಲಕಾಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಟಿ.ಮೇಗಡಹಳ್ಳಿ ಗ್ರಾಮದಲ್ಲಿ, ಚಾಸಾ.2 ರವರ ಮನೆಯ ಬಳಿ ಇದ್ದ ಡ್ರೈ ನ್ ಅನ್ನು ಚಾಸಾ.1 ರವರು ಮುಚ್ಚುತ್ತಿದ್ದಾಗ, ಮೇಲ್ಕಂಡ 1 ರಿಂದ 3 ನೇ ಆರೋಪಿತರಾದ ನೀವು ಅಲ್ಲಿಗೆ ಬಂದು, ಡ್ರೈ ನ್ ಅನ್ನು ಏಕೆ ಮುಚ್ಚುತ್ತಿದ್ದೀಯಾ ಎಂದು ಚಾಸಾ.2 ರವರ ಮೇಲೆ ಏಕಾಏಕಿ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಮೇಲ್ಕಂಡ 1 ರಿಂದ 3 ನೇ ಆರೋಪಿತರಾದ ನೀವು ಚಾಸಾ.2 ರವರೊಂದಿಗೆ ಗಲಾಟೆ ಮಾಡುತ್ತಿದ್ದು, ಆಗ ಚಾಸಾ.2 ರವರು ಚಾಸಾ.1 ರವರನ್ನು ಮನೆಯೊಳಗೆ ಕರೆದುಕೊಂಡು ಹೋದಾಗ, 2 ಮತ್ತು 4 ನೇ ಆರೋಪಿತರು ಚಾಸಾ.2 ರವರ ಮನೆಗೆ ನುಗ್ಗಿ ಚಾಸಾ.2 ರವರ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.448 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಮೇಲ್ಕಂಡ 2 ಮತ್ತು 4 ನೇ ಆರೋಪಿಯಾದ ನೀವು, ಚಾಸಾ.2 ರವರ ಜುಟ್ಟನ್ನು ಹಿಡಿದುಕೊಂಡು ಕೆಳಕ್ಕೆ ಕೆಡವಿಕೊಂಡು ಕೈಗಳಿಂದ ಮೈಕೈಗೆ ಹೊಡೆದು, ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಪ್ರಶ್ನೆಃ ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

ಉತ್ತರಃ1 ನೇ ಆರೋಪಿಃ

ಉತ್ತರಃ2 ನೇ ಆರೋಪಿಃ

ಉತ್ತರಃ3 ನೇ ಆರೋಪಿಃ

ಉತ್ತರಃ4 ನೇ ಆರೋಪಿಃ

ಪ್ರಶ್ನೆಃ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?

ಉತ್ತರಃ1 ನೇ ಆರೋಪಿಃ

ಉತ್ತರಃ2 ನೇ ಆರೋಪಿಃ

ಉತ್ತರಃ3 ನೇ ಆರೋಪಿಃ

ಉತ್ತರಃ4 ನೇ ಆರೋಪಿಃ

(ಈ ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿದ ನಂತರ ಅವರು ನೀಡಿದ ಉತ್ತರವನ್ನು ನಾನು ನನ್ನ ಸ್ವಂತ ಬರಹದಲ್ಲಿ ದಾಖಲು ಮಾಡಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ. ದ. ನ್ಯಾ ದಂ., ಟಿ.ನರಸೀಪುರ.**